ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 15-22

IIMRD JOURNALS
www.iimrd.com

# ಕುವೆಂಪು ಅವರ 'ಬಲಿದಾನ' ನಾಟಕ – ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸ್ಥಿತ್ಯಂತರಗಳು

**ಜಗದೀಶ. ಬಿ.ಕೆ.**[1]

## ಪೀಠಿಕೆ

18ನೇ ಶತಮಾನದ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಬೇರೂರಿದ ನಂತರದಲ್ಲಿ ಸ್ವದೇಶಿಯತೆ, ರಾಷ್ಟ್ರೀಯ ಪ್ರಜ್ಞೆ, ಪ್ರಾದೇಶಿಕ ಹಿರಿಮೆ, ದೇಶಿಯ ಸಂಸ್ಕೃತಿಯ ಗರಿಮೆ, ರಾಷ್ಟ್ರೀಯ ವಾದಿಗಳ ಏಳಿಗೆ, ಶಿಕ್ಷಣ, ಸಮಾಜ ಸುಧಾರಕರು ಇನ್ನೂ ಮುಂತಾದ ಏಳಿಗೆಗಳ ಮೂಲಕ ಬ್ರಿಟಿಷ್ ವಸಾಹತುಶಾಹಿ ಆಡಳಿತದ ವಿರುದ್ಧ ಭಾರತವು ಸ್ವಾತಂತ್ರ್ಯಕ್ಕಾಗಿ ಕ್ರಾಂತಿ ಎಸಗಿದ ಕಾಲವು ಒಂದು ಮಹತ್ತರವಾದ ಸ್ಥಿತ್ಯಂತರ ಕಾಲವೇ ಸರಿ. ಈ ಸ್ಥಿತ್ಯಂತರ ಕಾಲವು ಭಾರತದ ಹಲವು ರೀತಿಯ ತಲ್ಲಣ, ಸವಾಲು ಹಾಗೂ ಭವಿಷ್ಯದ ಆಕಾಂಕ್ಷೆಗಳಿಗೆ ಕಾರಣವೂ ಆಯಿತು.

"ಯಾವುದೇ ಸಮಾಜವು ಕ್ರಾಂತಿಕಾರಕ ಬದಲಾವಣೆಗಳನ್ನು ಹೊಂದುವಾಗ ಅಲ್ಲಿ ಸಶಕ್ತ ಬರಹಗಾರರ ಕೊಡುಗೆ ಸಾಕಷ್ಟು ಇದ್ದೇ ಇರುತ್ತದೆ. ಹಾಗೇ, ಸ್ಥಿತ್ಯಂತರ ಕಾಲೀನ ಸಮಾಜಗಳು ಸಶಕ್ತ ಬರಹಗಾರರನ್ನು ರೂಪಿಸುತ್ತವೆ ಕೂಡ. ಫ್ರಾನ್ಸಿನ ಮಹಾಕ್ರಾಂತಿ ಇದಕ್ಕೆ ಸಾಕ್ಷಿ. ಈ ದೃಷ್ಟಿಯಿಂದ ಕುವೆಂಪು ತಮ್ಮ ಬರಹದ ಮೂಲಕ ಸಮಾಜದ ಕ್ರಾಂತಿಕಾರಕ ಪಲ್ಲಟಗಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಮತ್ತು ತಾವು ಸ್ವತಃ ಸ್ಥಿತ್ಯಂತರ ಸಮಾಜದ ಒಂದು ಉತ್ಪನ್ನವೂ ಆಗಿದ್ದಾರೆ."[1] ಅಂತೆಯೇ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಕಾಲದ ಭಾರತದ ಸ್ಥಿತ್ಯಂತರಗಳನ್ನು ಹಾಗೂ ಆಗಬೇಕಾದ ಸ್ಥಿತ್ಯಂತರಗಳನ್ನು ತಮ್ಮ ನಾಟಕಗಳಲ್ಲಿ ತಾತ್ವಿಕವಾಗಿ, ತಾರ್ಕಿಕವಾಗಿ, ದಾರ್ಶನಿಕವಾಗಿ ಸಮರ್ಥವಾಗಿ ಪ್ರೇಕ್ಷಕರ ಮುಂದೆ ಬಿಂಬಿಸಿದ್ದಾರೆ. ಅದರಲ್ಲೂ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟವನ್ನೇ ವಸ್ತುವಾಗುಳ್ಳ ಅವರ 'ಬಲಿದಾನ' ನಾಟಕದಲ್ಲಿ ಅಂದಿನ ಸ್ಥಿತ್ಯಂತರಗಳನ್ನೂ, ಮುಂದಿನ ಬದಲಾವಣೆಯ ಆಕಾಂಕ್ಷೆಗಳನ್ನೂ ಪ್ರೇಕ್ಷಕರ ಮುಂದೆ ಪ್ರದರ್ಶಿಸಲು ಮುಂದಾಗಿದ್ದಾರೆ.

---

[1] *ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.*

ಸ್ವಾತಂತ್ರ್ಯ ಪೂರ್ವದಲ್ಲೇ ರಚಿತಗೊಂಡ 'ಬಲಿದಾನ' ನಾಟಕವು (ಪ್ರಕಟಗೊಂಡಿದ್ದು 1948 ರಲ್ಲಿ) ಸ್ವಾತಂತ್ರ್ಯಪೂರ್ವ ಭಾರತದ ಸ್ಥಿತಿ, ಸ್ವಾತಂತ್ರ್ಯ ಹೋರಾಟ ಸಂದರ್ಭದ ಸ್ಥಿತಿ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಪರಿಸ್ಥಿತಿಗಳನ್ನು ಕುರಿತ ಒಂದು ಸಾಂಕೇತಿಕ ಚಿತ್ರ ರೂಪಕ. ಈ ಮೂರು ಸ್ಥಿತಿಗಳನ್ನು ಮೂರು ದೃಶ್ಯಗಳಲ್ಲಿ ಮೂಡಿಸಿದ ಏಕಾಂಕ ನಾಟಕ ಇದು. ಭಾರತಾಂಬೆ ಮತ್ತು ಭರತಸುತ ಎಂಬೆರಡು ಪಾತ್ರಗಳ ಸಂವಾದದಲ್ಲಿ ಇಡೀ ಕಥೆ ನಡೆಯುತ್ತದೆ. ಇಲ್ಲಿ ಭರತಮಾತೆಯು ಇಡೀ ಭಾರತದ ಅಂತರಂಗ ಚೈತನ್ಯಶಕ್ತಿ ಪ್ರತಿಮೆಯಾಗಿ ನಿಂತರೆ; ಭರತಸುತನು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡಲು ಧೀರತೆಯಿಂದ ಹೋರಾಡಿದ ಕೋಟಿ ಕೋಟಿ ಭಾರತೀಯರ ಪ್ರತಿಮೆಯಾಗಿ ನಿಲ್ಲುತ್ತಾನೆ. ನಾಟಕದ ಅಲ್ಲಲ್ಲಿ 'ಭಾರತಮಾತೆಯನ್ನು ವರ್ಣಿಸುವ ಕವಿಯ 'ವಾಣಿ' ಕೇಳಿಸುತ್ತದೆ. ಒಂದು ಸಂದರ್ಭದಲ್ಲಿ ಭಾರತ ಮಾತೆಗೆ ಕೇಳಿಸುವ 'ಛಾಯಾಧ್ವನಿ'ಯು ಕೆಚ್ಚೆದೆಯಿಂದ ಹೋರಾಡಿ ಮಡಿದ ವೀರರಿಗೆ ಪ್ರತಿಮೆಯಾಗಿ ನಿಲ್ಲುತ್ತದೆ. ಹಾಗೆ, ನಾಟಕದ ಅಲ್ಲಲ್ಲಿ ಕೆಲವು ಪ್ರತಿಮೆಗಳನ್ನು ಬಳಸುವ ಮೂಲಕ ಭಾರತದ ಸ್ಥಿತಿಗತಿಗಳನ್ನು ಸಮರ್ಥವಾಗಿ ನಾಟಕಕಾರರು ನಿರೂಪಿಸುತ್ತಾರೆ.

'ಬಲಿದಾನ' ನಾಟಕದ ಮೊದಲ ದೃಶ್ಯವು ಸ್ವಾತಂತ್ರ್ಯಪೂರ್ವ ಸ್ತರದಲ್ಲೂ, ಎರಡನೇ ದೃಶ್ಯವೂ ಸ್ವಾತಂತ್ರ್ಯ ಹೋರಾಟ ಸಂದರ್ಭದ ಸ್ತರದಲ್ಲೂ ಮೂರನೇ ದೃಶ್ಯವು ಸ್ವಾತಂತ್ರ್ಯೋತ್ತರ ಸ್ತರದಲ್ಲೂ ನಡೆಯುವುದರಿಂದ ಭೂತ, ವರ್ತಮಾನ ಹಾಗೂ ಭವಿಷತ್ ಭಾರತದ ಚಿತ್ರಣವನ್ನು ಈ ನಾಟಕ ಹಿಡಿದಿಡುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸ್ಥಿತ್ಯಂತರಗಳನ್ನು ಈ ಮೂರು ಸ್ತರಗಳಲ್ಲಿಯೇ ವಿವೇಚಿಸಬಹುದು.

**ಸ್ವಾತಂತ್ರ್ಯಪೂರ್ವ ಸ್ಥಿತ್ಯಂತರಗಳು**

'ಬಲಿದಾನ' ನಾಟಕದ ಮೊದಲ ದೃಶ್ಯವು ಪಾಳುಬಿದ್ದ ಕಾಳಿಕಾ ದೇವಾಲಯದಿಂದ ಪ್ರಾರಂಭವಾಗುತ್ತದೆ. ಇಡೀ ಕಾಳಿಕಾದೇವಾಲಯ ಕಗ್ಗತ್ತಲಿನಿಂದ ಕೂಡಿದೆ. ಈ ಕಗ್ಗತ್ತಲು ಸ್ವಾತಂತ್ರ್ಯಕ್ಕಾಗಿ ಹೋರಾಡದ ಭಾರತೀಯರ ಅಜ್ಞಾನ ಹಾಗೂ ಭಾರತದ ದುಸ್ಥಿತಿಯ ಸಂಕೇತವಾಗಿ ಮೂಡಿದೆ. "ಭಾರತಾಂಬೆ ಮತ್ತು ಕಾಳಿ, ಅಸ್ವತಂತ್ರ ಭಾರತ ಮತ್ತು ಪಾಳುಬಿದ್ದ ಕಾಳಿಕಾದೇವಾಲಯಗಳ ಅವಿನಾಭಾವ; ಈ ನಾಟಕವಿಡೀ ನಡೆಯುವುದು ಕಾಳಿಕಾ ದೇವಾಲಯದಲ್ಲಿ– ಈ ಪ್ರಜ್ಞೆಗಳು ಇಲ್ಲದಿದ್ದರೆ ಈ ನಾಟಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಬರುವುದಿಲ್ಲ. ಶ್ರೀ ರಾಮಕೃಷ್ಣ ಪರಮಹಂಸ ಪ್ರಭಾವಿತ ಕುವೆಂಪು ಅವರ ಭಾರತಾಂಬೆ–ಕಾಳಿಯರನ್ನು ಅವಿನಾಭಾವಿಸುವುದರಲ್ಲಿ ಅವರ ದರ್ಶನ ದೃಷ್ಟಿಯನ್ನು ಕಂಡುಕೊಳ್ಳಬಹುದು."[2] ಕಾಳಿಕಾದೇವಾಲಯದ ಕಗ್ಗತ್ತಲಲ್ಲಿ ಭರತಸುತ ಮಲಗಿದ್ದರೆ, ಭಾರತಾಂಬೆ ದೂರದಲ್ಲಿ ನಿಂತಿದ್ದಾಳೆ. ಸ್ವಲ್ಪ ಸಮಯದಲ್ಲೇ ಕಗ್ಗತ್ತಲು ಮಬ್ಬುಗತ್ತಲಾದಾಗ ಭಾರತಸುತ ಎಚ್ಚೆತ್ತು, ಕಣ್ಣುಜ್ಜಿಕೊಂಡು ಭಾರತಾಂಬೆಯನ್ನು ಕಂಡು ಬೆಚ್ಚಿ, ಆಕೆಯನ್ನು ಮಾತನಾಡಿಸಲು ಮುಂದಾಗುತ್ತಾನೆ. ಇಲ್ಲಿ ಕಗ್ಗತ್ತಲು

ಮಬ್ಬುಗತ್ತಲಾಗುವುದು ಭಾರತದ ಸ್ವಾತಂತ್ರ್ಯದ ಮುಂಜಾವನ್ನು ಸಂಕೇತಿಸಿದರೆ, ಭರತಸುತ ಕಣ್ಣುಜ್ಜಿಕೊಂಡು ಎದ್ದೇಳುವುದು ಅಂದಿನ ಭಾರತೀಯ ಸ್ವಾತಂತ್ರ್ಯದ ಜಾಗೃತಿಗೆ ಅಣಿಯಾಗುವಿಕೆಯನ್ನು ಸಂಕೇತಿಸುತ್ತದೆ. ಭಾರತವು ಬ್ರಿಟಿಷ್ ಅಧಿಪತ್ಯಕ್ಕೆ ಒಳಗಾಗಿ ಹಲವು ವರ್ಷಗಳು ಕಳೆದರೂ ಇಲ್ಲಿನ ಭಾರತೀಯರಿಗೆ ಸ್ವಾತಂತ್ರ್ಯದ ಪ್ರಜ್ಞೆಯೇ ಮೂಡಿರುವುದಿಲ್ಲ.

***"ಯಾರು ನೀನೆಲೆ ತಾಯೆ? ಮುಸುಗಿದೀ ಕತ್ತಲಲಿ***

***ಮಬ್ಬಾಗಿ ಕಾಣುತಿಹೆ!"***

ಎಂದು ಭಾರತಾಂಬೆಯನ್ನು ಕೇಳುವ ಭರತಸುತನ ಮಾತು, ಹೆತ್ತ ತಾಯಿಯ ಗುರುತೇ ಮರೆತುಹೋಗಿ ಅನ್ಯಾಶ್ರಿತ ಗುಲಾಮತನಕ್ಕೆ ತುತ್ತಾದ ಕೋಟಿ ಕೋಟಿ ಭಾರತೀಯರ ಅಜ್ಞಾನದ ಉದ್ಗಾರವಾಗಿದೆ. ಬ್ರಿಟಿಷರ ಅಧಿಪತ್ಯಕ್ಕೂ ಮೊದಲು ಭಾರತವು ಸ್ವದೇಶಿಯ ಆಡಳಿತದಲ್ಲೇ ಇತ್ತು. ಆದರೆ, ಬ್ರಿಟಿಷರ ರಾಜಕೀಯ ಅಧಿಪತ್ಯದಿಂದಾಗಿ ಭಾರತವು ಎಲ್ಲಾ ನೆಲೆಗಳಿಂದ ತನ್ನ ವೈಭವ, ಗೌರವ, ಹಕ್ಕು ಬಾಧ್ಯತೆಗಳನ್ನು ಕಳೆದುಕೊಂಡು ಭಿಕ್ಷುಕತನದಲಿ ಜೀವಿಸುವಂತಾಯಿತು. ಇದನ್ನು ನಾಟಕಕಾರರು ಭಾರತಾಂಬೆಯಿಂದಲೇ ಹೇಳಿಸುವುದು ಹೀಗೆ – 'ದಿಕ್ಕಿಲ್ಲದಲೆದಾಡುತಿಹ ಭಿಕ್ಷುಕಳ್' ಎಂಬ ಭಾರತಾಂಬೆಯ ಮಾತಿಗೆ ಭರತಸುತನು 'ಮಕ್ಕಳಿದ್ದರೂ ಕೂಡ ಭಿಕ್ಷುಕಿಯೆ ನೀನು?' ಎಂದು ಪ್ರಶ್ನಿಸಲು 'ದಾಸರಾಗಿಹರವರ್, ನನ್ನ ಮರೆತಿಹರು', 'ನನ್ನ ಮನೆಯಲಿ ನಾನೆ ತೊತ್ತಾಗಿ ಬಿದ್ದಿರುವೆ!' ಎಂಬ ಭಾರತಾಂಬೆಯ ದುಮ್ಮಾನವು ಭಾರತದ ಅಂದಿನ ರಾಜಕೀಯ ಸ್ಥಿತ್ಯಂತರದ ನೆಲೆಯನ್ನು ವ್ಯಕ್ತಪಡಿಸುತ್ತದೆ.

ಭಾರತವು ಅನಾದಿ ಕಾಲದಿಂದಲೂ ಸಂಪದ್ಭರಿತ ರಾಷ್ಟ್ರವಾಗಿತ್ತು. ಇಲ್ಲಿ ಒಂದು ರಾಷ್ಟ್ರ ಅತ್ಯುನ್ನತ ಪ್ರಗತಿ ಸಾಧಿಸಲು ಬೇಕಾದ ಸವಲತ್ತುಗಳೆಲ್ಲವೂ ಇದ್ದವು. ಬ್ರಿಟಿಷರ ಅಧಿಪತ್ಯವು ಇಲ್ಲಿನ ಸಂಪತ್ತನ್ನು ಇಂಗ್ಲೆಂಡಿಗೆ ವರ್ಗಾಯಿಸುವ ಯಂತ್ರವಾಗಿಬಿಟ್ಟಿತು. ಭಾರತಮಾತೆ ತನ್ನ ಸಿರಿ–ಸಂಪತ್ತನ್ನು ಕಳೆದುಕೊಂಡು ಭಿಕ್ಷುಕಳಾಗಿ, ಸೇವಕಳಾಗಿ ಕಾಲಕಳೆಯುವ ಪರಿಸ್ಥಿತಿ ಎದುರಾಯಿತು. 'ಬಲಿದಾನ' ನಾಟಕದ ಭರತಸುತನು ಭಿಕ್ಷುಕಳಾದ ಭಾರತಾಂಬೆಯನ್ನು 'ಏನಾಯ್ತು ನಿನ್ನ ಸಿರಿ?' ಎಂದು ಪ್ರಶ್ನಿಸಲು, ಅದಕ್ಕೆ ಭಾರತಾಂಬೆಯು 'ಹೆರರ ಪಾಲಾಯ್ತು' ಎನ್ನುತ್ತಾಳೆ, ಹಾಗೆ, 'ಧನಧಾನ್ಯ ಬೇಕಾದ ಹಾಗಿಹುದು, ಆದರೆನಗಿಲ್ಲ! ಹೊಟ್ಟೆಗಿಲ್ಲದೆ ಸೊರಗಿ ಸಾಯುತಿಹೆನಯ್ಯೋ' ಎಂಬ ಭಾರತಾಂಬೆಯ ನೋವಿನ ಉದ್ಗಾರವು ಅಂದಿನ ಭಾರತದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಗೆ ಹಿಡಿದ ಕನ್ನಡಿ. ದಾದಾಬಾಯಿ ನವರೋಜಿಯವರು 1800 ರ ಸಂದರ್ಭದಲ್ಲೇ ಭಾರತದ ಆರ್ಥಿಕ ಚೋರತನದ ಬಗ್ಗೆ 'ಸಂಪತ್ತಿನ ಸೋರಿಕೆ' ಸಿದ್ಧಾಂತ ಮಂಡಿಸಿದ್ದನ್ನು ಇಲ್ಲಿ ನೆನೆಯಬಹುದು.

ಭಾರತಾಂಬೆಯು ತನ್ನ ಬಿಡುಗಡೆಗೆ 'ಬಲಿದಾನ'ವನ್ನು ಬೇಡಿ, ಆತನಿಂದ 'ಸ್ವಾರ್ಥಮಂ ಕರ್ಮಮಂ, ಫಲಬುದ್ಧಿಯಂ ತ್ಯಜಿಸಿ, ಮಾಡುವೆನು ನಿನಗಾಗಿ' ಎಂಬ ವಾಗ್ದಾನವನ್ನು ಪಡೆಯುತ್ತಾಳೆ. ಇಷ್ಟಾದರೂ ಭರತಸುತನು ಆಕೆ ತನ್ನ ತಾಯಿಯೇ ಎಂಬುದನ್ನು ಅರಿಯದೆ,

*ನೀನಾರು, ಮಾತಾಯಿ?' ಎಂದು ಕೇಳುತ್ತಾನೆ. ಆಗ ಭಾರತಾಂಬೆಯು,*

*ವೇದಗಳ ಹೆತ್ತವಳ್! ಯೋಗಿಗಳ ಪಡೆದವಳ್ !*

*ಲೋಕಕ್ಕೆ ವೀರರನು ಕೊಟ್ಟವಳ್ !*

*ಮಾನವಗೆ ಬುದ್ಧಿನೀಡಿದ ತಾಯಿ,*

*ನಾನ್ ಭಾರತಾಂಬೆ! (ಸುಯ್ದು)*

ಎಂದು ವಾಚ್ಯವಾಗಿಯೇ ಹೇಳಿ ಸುಯ್ಲಿಡುತ್ತಾಳೆ. ಭಾರತಾಂಬೆಯ ಈ ಸುಯ್ಲು ಇಂಗ್ಲೀಷರ ಆಳ್ವಿಕೆಯಿಂದ ಕಳೆದುಕೊಂಡ ತನ್ನ ಸ್ವಾತಂತ್ರ್ಯ, ಗತವೈಭವವನ್ನು ಮರಳಿ ಗಳಿಸಿಕೊಳ್ಳಲು ತನ್ನ ಮಕ್ಕಳ ನೆರವು ದೊರಕಿತೇ ಎಂಬ ಅಭಿಪ್ರಾಯದಲ್ಲಿ ಮೂಡಿಬಂದಿದೆ. ಭಾರತವು ಪೂರ್ವದಲ್ಲಿ ರಸಋಷಿಗಳ ನೆಲೆಯಾಗಿತ್ತು. ಕರ್ಮಯೋಗಿಗಳ ಬೀಡಾಗಿತ್ತು. ಸ್ವಾತಂತ್ರ್ಯವೀರರ ನಾಡಾಗಿತ್ತು. ಧರ್ಮದುರಂಧರ ಆತ್ಮಜ್ಞಾನಿಗಳ ತವರು ನೆಲೆಯಾಗಿತ್ತು. ಅಂತಹ ಭವ್ಯ ಭಾರತವು ವಿದೇಶಿಯರ ಆಕ್ರಮಣದಿಂದ ತನ್ನ ಸತ್ವ–ಸ್ವತ್ತುಗಳನ್ನು ಕಳೆದುಕೊಂಡು ಹಲವು ಸಂಕೋಲೆಗಳಲ್ಲಿ ಸಿಲುಕಿ ಭಿಕ್ಷುಕಿಯಂತೆ ಬಾಳುವಂತಾಗಿತ್ತು.

"ಈ ಮೊದಲನೆಯ ದೃಶ್ಯದಲ್ಲಿ ಭಾರತಮಾತೆ ತನ್ನ ಪೂರ್ವವೈಭವಗಳನ್ನೆಲ್ಲ ಕಳೆದುಕೊಂಡು ಪರಕೀಯರ ದಾಸ್ಯದಿಂದಾಗಿ ಶೃಂಖಲಾಬದ್ಧಳಾಗಿ ಸ್ವಾತಂತ್ರ್ಯಪೇಕ್ಷೆಯಿಂದ ತನ್ನ ಮಕ್ಕಳ ಬಲಿದಾನವನ್ನು ಕೇಳುವ ಸ್ಥಿತಿಯಲ್ಲಿರುವಂತೆ ಚಿತ್ರಿತೆಯಾಗಿದ್ದಾಳೆ. ಅವಳ ಗತವೈಭವ ನಮಗೆ ಗೊತ್ತಿದ್ದದ್ದೇ. ಅದು ಪ್ರಾಚೀನ ಪ್ರಪಂಚದ ಯಾವ ರಾಷ್ಟ್ರಗಳೂ ಪಡೆಯದಿದ್ದ ಒಂದು ವೈಭವ. ಈ ವೈಭವಕ್ಕೆ ಯಾವ ರಾಷ್ಟ್ರಗಳಿಗೂ ಇಲ್ಲದ ಒಂದು ಪರಂಪರೆಯುಂಟು. ಇಂಗ್ಲೀಷರ ಆಕ್ರಮಣದಿಂದ ಮತ್ತು ಸ್ವದೇಶಿಯರ ಅಂತಃಕಲಹಗಳಿಂದ ಭರತಮಾತೆಗೆ ಆ ಗತಿ ಒದಗಿತು. ಕಡೆಗೆ ಅವಳ ಮಕ್ಕಳೇ ಅವಳನ್ನು ಗುರುತಿಸಲಾರದ ಸ್ಥಿತಿ ಪ್ರಾಪ್ತವಾಯಿತು. ಐದಾರು ಸಹಸ್ರ ವರ್ಷಗಳಿಂದ ಬೆಳೆದು ಬಂದ, ಈಗಲೂ ಬೆಳೆದುಬರುತ್ತಿರುವ ಒಂದು ಅಂತಃಸತ್ವದಿಂದ ಆಕೆ ಉಸಿರು ಹಿಡಿದಿದ್ದಾಳೆ ಎನ್ನುವ ಸ್ಥಿತಿ ಸ್ವಾತಂತ್ರ್ಯಪೂರ್ವದ ಆ ದಾಸ್ಯಯುಗದಲ್ಲಿ ಆಕೆಗೆ ಪ್ರಾಪ್ತವಾಗಿತ್ತು."[3] ಬ್ರಿಟಿಷ್ ಅಧಿಪತ್ಯವು ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಹಲವು ಸ್ಥಿತ್ಯಂತರಗಳಿಗೆ ಎಡೆಮಾಡಿಕೊಟ್ಟಿತು. ಇಂತಹ ಸ್ಥಿತ್ಯಂತರಗಳಲ್ಲಿ ಭಾರತದ ರಾಜಕೀಯ ಹಸ್ತಾಂತರ, ಆರ್ಥಿಕ ದುಸ್ಥಿತಿ, ಸಾಮಾಜಿಕ ಪರಿಸ್ಥಿತಿ, ಸಾಂಸ್ಕೃತಿಕ ದಿವಾಳಿತನ ಇವು ಪ್ರಮುಖವಾದವುಗಳು. ಕುವೆಂಪು ಅವರು ತಮ್ಮ 'ಬಲಿದಾನ'

ನಾಟಕದಲ್ಲಿ ಈ ಎಲ್ಲಾ ಅಂಶಗಳನ್ನು ಸಾಂಕೇತಿಕವಾಗಿ ಪ್ರತಿಮಾ ರೂಪದಲ್ಲಿ ಚಿತ್ರಿಸಿರುವುದು ನಾಟಕದ ಅನನ್ಯತೆಯನ್ನು ತೋರ್ಪಡಿಸುತ್ತದೆ.

**ಸ್ವಾತಂತ್ರ್ಯ ಹೋರಾಟ ಸಂದರ್ಭದ ಸ್ಥಿತ್ಯಂತರಗಳು**

1940ರ ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿದ್ದ ಭಾರತದ ಸ್ಥಿತಿಗತಿಯನ್ನು ಎರಡನೇ ದೃಶ್ಯವು ಹಿಡಿದಿಡುತ್ತದೆ. ಭಾರತದ ಅಂತರಂಗದ ಚೈತನ್ಯ ಸ್ವರೂಪಿಯಾದ ಭಾರತಾಂಬೆಯು ತನ್ನ ಗತಕಾಲದ ವೈಭವವನ್ನು ಸ್ಮರಿಸಿಕೊಂಡು, ಪುನಃ ಕಳೆದುಕೊಂಡ ಸ್ವಾತಂತ್ರ್ಯವನ್ನು ಮರಳಿಗಳಿಸಿಕೊಳ್ಳಲು ಮಕ್ಕಳನ್ನು ಅಣಿಗೊಳಿಸಿದ್ದಾಳೆ. ಆದರೆ, ಅವಳ ಆ ಗತಕಾಲದ ವೈಭವ ಮತ್ತೆ ಮರುಕಳಿಸುವುದೇ ಎಂಬ ಸಂದೇಹ, ಗೊಂದಲ, ಆತಂಕ ಅವಳಿಗೆ ಇದ್ದೇ ಇದೆ. ಜೊತೆಗೆ ಅವಳಲ್ಲಿ ಉತ್ಸಾಹವೂ ಇದೆ. ಭರವಸೆಯೂ ಇದೆ. ಒಂದು ರೀತಿಯ ಉದ್ವಿಗ್ನತೆ ಆಕೆಯಲ್ಲಿದ್ದ ಸಂದರ್ಭ ಅದು.

ಸ್ವಾತಂತ್ರ್ಯದ ಕಟ್ಟಕಡೆಯ ಹೋರಾಟದಲ್ಲಿ 'ಮಾಡು ಇಲ್ಲವೆ ಮಡಿ' ಎಂಬ ಘೋಷವಾಕ್ಯ ಭಾರತದೆಲ್ಲೆಡೆ ಹರಡಿತ್ತು. ಇಂತಹ ಸಂದರ್ಭದ ಭಾರತವು ಕೇವಲ ರಾಜಕೀಯವಾಗಿ ಮಾತ್ರ ದಾಸ್ಯಕ್ಕೊಳಗಾಗಲಿಲ್ಲ. ಸಾಂಸ್ಕೃತಿಕವಾಗಿಯೂ, ಆರ್ಥಿಕವಾಗಿಯೂ ದಾಸ್ಯತನಕ್ಕೆ ಒಳಗಾದದ್ದು ವಿಷಾದ.

*.................. ನಾಗರಿಕತೆಯ*

*ನಾಗಿನಿಯು ಪ್ರಗತಿನಾಮಕ ಫಣೆಯ ಮೇಲೆತ್ತಿ*

*ಚುಂಬಿಸಿಯೆ ಕೊಲ್ಲಲೆಳಸುತಿದೆ: ಹಿಂದಿನ ಬುತ್ತಿ*

*ಸವೆಯುತಿದೆ*

ಭಾರತ ಪರಂಪರೆಯ ಮೌಲ್ಯಯುತ ಸಂಸ್ಕೃತಿಗಳು ತೊಲಗಿ, ಪಾಶ್ಚಾತ್ಯರ ನಾಗರಿಕತೆಯು ಪ್ರಗತಿ ಎಂಬ ಹೆಸರಿನಲ್ಲಿ ಭಾರತವನ್ನು ಆಕ್ರಮಿಸುತ್ತಿದ್ದ ಕಾಲವದು. ನಮ್ಮ ಸ್ವಂತಿಕೆಯ ಮೌಲ್ಯಯುತ ಗತವೈಭವವು ಮತ್ತೆ ಮರುಕಳಿಸಿ, ನಾಗರಿಕತೆ ಎಂಬ ಹಾವಿನ ಪ್ರಗತಿಯ ಎಡೆಯನ್ನು ತುಳಿಯಲು ಸಾವು ಬದುಕಿನ ಕಟ್ಟಕಡೆಯ ಹೋರಾಟ ಅನಿವಾರ್ಯವಾಗಿ ಅಂದು ಏರ್ಪಟ್ಟಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಕಟ್ಟಕಡೆಯ ಹೋರಾಟದಲ್ಲಿ ಜಡತ್ವದಿಂದ ಶಾಂತಿ–ಕ್ರಾಂತಿ ಮಾರ್ಗದ ಬಲಿದಾನಕ್ಕೆ ಬದಲಾದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೆ, ಈ ಬಲಿದಾನಗಳು ನಮ್ಮ ಆಂತರಿಕ ಸಂಕೋಲೆಗಳಿಂದಲೂ ನಡೆಯಲು ಪ್ರಾರಂಭವಾದವು. ನಾಟಕದ ಭರತಸುತನು ಕೊನೆಗೂ ಬಿಡುಗಡೆಯ ಕೀಲಿಕೈ ತರುತ್ತಾನೆ. ಈ ಕೀಲಿಕೈ "ಸೋರರ ಸೋದರರ ಮೈಯ್ಯಿಂದ

ಚೆಲ್ಲಿದಾ ಮತವೈರ ಸಂಜಾತ ರುಧಿರ ಪ್ರವಾಹದೊಳ್' ಅದು ಮುಳುಗಿತ್ತು ಎಂದು ಹೇಳುವ ಮಾತು, ನಮ್ಮ ಸ್ವಾತಂತ್ರ್ಯ ಪ್ರಗತಿಯ ಕಾಲದಲ್ಲಾದ ಮತೀಯ ಹೋರಾಟಗಳನ್ನು ನೆನಪಿಗೆ ತರುತ್ತದೆ".[4] ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಪರಕೀಯರ ಬಾಹ್ಯ ಬಂಧನಕ್ಕಿಂತಲೂ ನಮ್ಮಲ್ಲೇ ಇದ್ದಂತಹ ಆಂತರಿಕ ಬಂಧನಗಳಿಗೆ ತೆತ್ತ 'ಬಲಿದಾನ'ದ ರೌದ್ರತೆಯನ್ನು ಇದು ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ಪರಕೀಯರ ದಾಸ್ಯತನದಿಂದ ರಾಜಕೀಯ ಸ್ವಾತಂತ್ರ್ಯಕ್ಕೆ ಸ್ಥಿತ್ಯಂತರಗೊಂಡ ಕಾಲವದು.

## ಸ್ವಾತಂತ್ರ್ಯೋತ್ತರ ಸ್ಥಿತ್ಯಂತರಗಳು

ಭಾರತದಿಂದ ಬ್ರಿಟಿಷರು ತೊಲಗಿದ ಮಾತ್ರಕ್ಕೆ ಸ್ವಾತಂತ್ರ್ಯ ಬಂದಿತು ಎಂಬುದು ಸತ್ಯವಲ್ಲ. ಅದು ಭಾರತದ ರಾಜಕೀಯ ಪರಕೀಯರ ಆಡಳಿತದಿಂದ ಮುಕ್ತವಾದುದಷ್ಟೆ. ಆದರೆ ಸರ್ವಮುಖಿಯಾದ ಸ್ವಾತಂತ್ರ್ಯವು ಬಂಧಿಯಾಗಿರುವುದು ನಮ್ಮಿಂದಲೆ. ಇದನ್ನು ಬಲಿದಾನ ನಾಟಕವು ಪಾಕ್ಷಿಕವಾಗಿ ದರ್ಶಿಸಲು ಮುಂದಾಗಿದೆ. ನಾಟಕದ ಭಾರತಾಂಬೆಯು ಪೂರ್ಣದೃಷ್ಟಿಯ ಸ್ವಾತಂತ್ರ್ಯ ಇನ್ನೂ ಸಾಫಲ್ಯಗೊಂಡಿಲ್ಲದ ಕಾರಣ ಆಕೆ ದೀಪ್ತಳಾಗಿಲ್ಲ. ಇದನ್ನು ಭಾರತಾಂಬೆಯೇ ಹೇಳುವುದು ಹೀಗೆ–

*'ಕಬ್ಬೊರ್ನಿನ್ನ ಸಂಕೋಲೆಯಂ*
*ಕಳಚಿ, ಚೆಂಬೊನ್ನ ಮಿಳಿಗಳಿಂ*
*ಸ್ವಾತಂತ್ರ್ಯದರ್ಥಮಂ ಬಂದಿಸದಿರನರ್ಥದಿಂ'*
*ಬಾಹ್ಯಬಂಧನಗಳಂ ಕಳಲ್ಚದಿರಿ ದಿಟಂ*
*ಆಂತರದ ಶೃಂಖಲೆಗಳೊಳವು ವಜ್ರೋಪಮಂ*
*ಅವುಗಳಂ ಕಡಿವ ದುಡಿಮೆಯೊಳಿರ್ಪನೆಡೆಗೆ*
*ನಾನೆಯ್ದಿದೆನ್, ನೆರವೀಯಲೆಂದಾತಂಗೆ!*

ಇಲ್ಲಿ 'ಸ್ವಾತಂತ್ರ್ಯ' ಪದದ ಪರಿಪೂರ್ಣ ಅರ್ಥ ವೇದ್ಯವಾಗುತ್ತದೆ. ಪರಕೀಯರ ಅಧಿಪತ್ಯ ಬಾಹ್ಯಬಂಧನವಾದರೆ, ನಮ್ಮ ಒಳಗಿರುವ (ಭಾರತಮತ್ತು ವ್ಯಕ್ತಿಯ ಹೃದಯ) ಸಂಕೋಲೆಗಳು ಆಂತರಿಕ ಸಂಕೋಲೆಗಳು. ಇವು ವಜ್ರಕವಚದಂತೆ ಸ್ವಾತಂತ್ರ್ಯವನ್ನು ಇನ್ನೂ ಆವರಿಸಿವೆ. ಪರಕೀಯರ ತೊಲಗುವಿಕೆಯ ಜೊತೆಗೆ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಸಂಕೋಲೆಗಳಿಂದ ಸ್ವಾತಂತ್ರ್ಯವು ಬಂಧಿಯಾದ ಪರಿಸ್ಥಿತಿ ನಿರ್ಮಾಣವಾಯಿತು. ಇದನ್ನು 'ಬಲಿದಾನ' ನಾಟಕವು ತನ್ನ ಆಂತರ್ಯದಲ್ಲೇ ಧ್ವನಿಸಿದೆ.

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಾದ ಬದಲಾವಣೆಯನ್ನು ಕುರಿತು ಕುವೆಂಪು ಭಾಷಣವೊಂದರಲ್ಲಿ "ಸ್ವಾತಂತ್ರ್ಯದೇವಿ ಗೌರಿಯಾಗಿ ಮಾತ್ರವೇ ಆಗಮಿಸುವುದಿಲ್ಲ. ಕಾಳಿಯಾಗಿಯೂ ಬರುತ್ತಾಳೆ ಎಂಬುದು ನಮಗೀಗಾಲೇ ಚೆನ್ನಾಗಿ ಅನುಭವಕ್ಕೆ ಬಂದಿದೆ. ಆಕೆಯ ಪದಚಿಹ್ನೆ ಉನ್ನತ ಮಾನವರ ಕ್ರೂರ ಹೃದಯದ ಅಲಕ್ತ ರಸದಿಂದಲೆಂಬಂತೆ ರಕ್ತಾಂಕಿತವಾಗಿರುವುದನ್ನು ನೋಡುತ್ತಿದ್ದೇವೆ. ಆಕೆಯ ಕೈಯಲ್ಲಿ ಜಟಿಲ ಸಮಸ್ಯೆಗಳೂ ದಾರುಣ ಸಂಕಟಗಳೂ ರೌದ್ರರಂಜಿತ ವಾಗಿರುವುದನ್ನು ಕಾಣುತ್ತಿದ್ದೇವೆ. ಬಹುಶಃ ಆಕೆ ಶಂಕರಿಯಾಗುವುದಕ್ಕೆ ಮೊದಲು ಭಯಂಕರಿಯಾಗುತ್ತಾಳೆ ಎಂದು ತೋರುತ್ತದೆ. ನಮ್ಮ ಅರ್ಹತೆಯನ್ನು ಅತ್ಯುಗ್ರವಾಗಿ ಪರೀಕ್ಷಿಸದೆ ಆಕೆ ಪ್ರಸನ್ನಳಗುವುದಿಲ್ಲ."[5] ಎಂದಿರುವುದು ಸ್ವಾತಂತ್ರ್ಯ ನಂತರದ ಭಾರತದಲ್ಲಾದ ನೈತಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಧಃಪತನವನ್ನು ಸ್ಪಷ್ಟೀಕರಿಸುತ್ತದೆ. ಇಂತಹ ಅಧಃಪತನಗಳ ಸಂಕೋಲೆ ಕಳಚಲು ಗಾಂಧಿಯವರಂತಹ ದಿವ್ಯ ಚೇತನ ಮುಂದಾಗಿ, ಸ್ವಾತಂತ್ರ್ಯದ ಮೊದಲ 'ಬಲಿದಾನ'ವಾದರು. ಈ ಬಲಿದಾನದ ನಂತರ ದೇಶದಲ್ಲಿ ಕ್ರಾಂತಿಯಿಂದ ಶಾಂತಿಗೆ ತಾತ್ಕಾಲಿಕ ಸ್ಥಿತ್ಯಂತರವಾಯಿತು.

ಭವಿಷ್ಯದಲ್ಲಿ ಸ್ವಾತಂತ್ರ್ಯ ನೆಲೆಸಲು ಆಗಬೇಕಾದ ಸ್ಥಿತ್ಯಂತರಗಳನ್ನೂ ಕುವೆಂಪು ಭಾರತಾಂಬೆಯಿಂದಲೇ ಈ ನಾಟಕದಲ್ಲಿ ನುಡಿಸಿದ್ದಾರೆ. "ನಾಡಿನ ಬಿಡುಗಡೆ ಹಾಗೂ ಮಾನವ್ಯದ ಬಿಡುಗಡೆ ಇವು ಜೀವನ ಸೌದರ್ಯಕ್ಕೆ ಅತ್ಯಾವಶ್ಯಕವಾದ ಮೂಲಭೂತವಾದ ಮಾತುಗಳೆಂದು ಅವರು ತಮ್ಮೆಲ್ಲ ಕೃತಿಗಳಲ್ಲೂ ಒತ್ತಿ ಹೇಳಿದ್ದಾರೆ. ಇದೇ ಮಾತು ಅವರ ನಾಟಕಗಳಲ್ಲೂ ನಾಟಿಕೊಂಡಿದೆ."[6] ಅಂತೆಯೇ ನಾಡಿನ ಬಿಡುಗಡೆಯ ಜೊತೆಗೆ ಹೃದಯದ ದೌರ್ಬಲ್ಯದ ಬಲಿಯ ತೆತ್ತು ಸದಾ ಚೈತನ್ಯರೂಪಿಯಾಗಿ ವ್ಯಕ್ತಿತ್ವ ಅರಳಿದ ನಿಜವಾದ ಮಾನವನು ದೇಶಕ್ಕೆ ಬಿಡುಗಡೆಗೊಂಡರೆ ಆಗ ಮಾತ್ರ ರಾಷ್ಟ್ರೀಯ ಸ್ವಾತಂತ್ರ್ಯ ಸಿದ್ಧಿಯು ದೊರಕುವುದು. ಕುವೆಂಪು ಅವರೇ ಹೇಳುವ ಹಾಗೆ, ಸ್ವಾತಂತ್ರ್ಯ ಜೀವನವಿರುವುದು ಈ ಬಲಿಪರಂಪರೆಯಲ್ಲಿ. ಅಂದರೆ ಈ ಮೇಲೆ ಹೇಳಿದ ಹಾಗೆ ಮಾನವ್ಯದ ಬಿಡುಗಡೆಯಲ್ಲಿ. ಇದನ್ನು 'ಬಲಿದಾನ' ನಾಟಕದಲ್ಲಿ ಅನನ್ಯವಾಗಿ ಚಿತ್ರಿಸಿದ್ದಾರೆ.

**ಆಕರ ಗ್ರಂಥ**


- ಕುವೆಂಪು. (1948). ಬಲಿದಾನ. ಉದಯರವಿ ಪ್ರಕಾಶನ, ಮೈಸೂರು .


**ಕೊನೆ ಟಿಪ್ಪಣಿಗಳು**

1. ಪ್ರಶಾಂತ ನಾಯಕ್ ಜಿ. (ಸಂ). (2006). ಸಾಹಿತ್ಯ ವಿಮರ್ಶೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.ಸಂ. 61.

2. ವಿವೇಕ ರೈ ಬಿ.ಎ. (1973). ಬಲಿದಾನ: ಸಾರ್ವಕಾಲಿಕ ಪ್ರಜ್ಞೆ, ಇಲ್ಲಿ ವಸಂತಕುಮಾರ್ ಎಂ.ಸಿ. (ಸಂ). ಕುವೆಂಪು ನಾಟಕ ಸಮೀಕ್ಷೆ, ಪಂಪ ಪ್ರಕಾಶನ, ಮೈಸೂರು. ಪು.ಸಂ. 322.
3. ಪರಮೇಶ್ವರಭಟ್ಟ ಎಸ್. ವಿ. (1996). ರಸಋಷಿ ಕುವೆಂಪು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪು.ಸಂ. 155
4. ತಿಪ್ಪೇರುದ್ರಸ್ವಾಮಿ ಎಚ್. (1969). ಕುವೆಂಪು ಅವರ ನಾಟಕಗಳು. ಕಾವ್ಯಶ್ರೀ ಪ್ರಕಾಶನ, ಮೈಸೂರು. ಪು.ಸಂ. 66.
5. ಚನ್ನಬಸಪ್ಪ ಕೊ. (ಸಂ). (1966). ಕುವೆಂಪು ಭಾಷಣಗಳು ಭಿನ್ನವತ್ತಳೆಗಳು. ಬಳ್ಳಾರಿ ಸಾಹಿತ್ಯ ಅಕಾಡೆಮಿ, ಬಳ್ಳಾರಿ. ಪು.ಸಂ. 106.
6. ಕೃಷ್ಣಕುಮಾರ್ ಕಲ್ಲೂರ್. (1950). ಕುವೆಂಪು ಅವರ ನಾಟಕಗಳು. ಇಲ್ಲಿ ಕುಲಕರ್ಣಿ ಎಚ್. ಬಿ. (ಸಂ). ಸಾಹಿತ್ಯಾಂಕ (ಕುವೆಂಪು–ಶ್ರೀರಂಗ, ಅ.ನ.ಕೃ), ಕುವೆಂಪು ಸಾಹಿತ್ಯ ಸಮಿತಿ, ಹುಬ್ಬಳ್ಳಿ. ಪು.ಸಂ. 17


IIMRD JOURNALS